ಎನ್ನುತಕ್ಕ ಶಿಫಾರಸ್ಸನ್ನು ಸರ್ಕಾರಕ್ಕೆ ಮಾಡುವ ಸಂದರ್ಭದಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ಈ ಎಲ್ಲಾ ಪರಿಸರ ಹೊಂದಿಕೊಂಡು ೬೪ ಬೆಡ್ ಹಾಸಿಗೆಯ ಆಸ್ಪತ್ರೆ ತುಂಬಾ ವರ್ಷದಿಂದ ನಡೆದು ಬಂದ ಆಸ್ಪತ್ರೆ. ಈ ಆಸ್ಪತ್ರೆಯನ್ನು ನೂರು ಬೆಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಬೇಕು ಎನ್ನುವ ಬೇಡಿಕೆ ಇಲಾಖೆ ಪುಟ್ಟಿಕ್ಕೆ ಹೊಂದಿಕೊಂಡು ಸರ್ಕಾರಕ್ಕೆ ಬಂದಿದೆ. ಸದನದಲ್ಲಿ ಈ ಬಗ್ಗೆ ಪ್ರಸ್ತಾಪವಾಗಿ ಪರಿಶೀಲನೆ ಮಾಡುವುದಾಗಿ ಉತ್ತರ ಕೂಡ ಸಂಬಂಧಪಟ್ಟ ಮಂತ್ರಿಗಳಿಂದ ಬಂದಿದೆ. ಆದರೆ ಇಷ್ಟರತನಕ ಕಾರ್ಯಗತವಾಗಿಲ್ಲ. ಆದ್ದರಿಂದ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ೬೪ ಹಾಸಿಗೆ ಇರುವಂಥ ಸರ್ಕಾರೀ ಆಸ್ಪತ್ರೆಯನ್ನು ನೂರು ಹಾಸಿಗೆಯ ಆಸ್ಪತ್ರೆಯನ್ನಾಗಿ ಪರಿವರ್ತಿಸಬೇಕಾಗಿ ತಮ್ಮ ಮುಖಾಂತರ ಸಂಬಂಧಪಟ್ಟ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಪೆಚ್. ಟಿ. ಕೃಷ್ಣಪ್ಪ (ಆರೋಗ್ಯ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪರಿಸ್ಥಿತಿಯನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡುತ್ತೇನೆ.

(೧೬) ಎನ್. ಎಲ್. ಕುಲಕರ್ಣಿ ಸಹಾಯಕ ಕಾರ್ಯದರ್ಶಿ ಲೋಕ ಸೇವಾ ಆಯೋಗ ಇವರು ಎರಡು ಬಾರಿ ಎನ್ ಕ್ಯಾಷ್‌ಮೆಂಟ್ ಬೆನಿಫಿಟ್ ಪಡೆದಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಈಗ ಹಾಲಿ ಇರುವ ನಿಯಮದ ಪ್ರಕಾರ ಎರಡು ವರ್ಷಗಳಿಗೊಮ್ಮೆ ಮಾತ್ರ ಸರ್ಕಾರಿ ನೌಕರರು ೩೦ ದಿನಗಳ ರಜವನ್ನು ಸರ್ಕಾರಕ್ಕೆ ಒಪ್ಪಿಸಿ (ಸರೆಂಡರ್ ಬೆನಿಫಿಟ್) ಪಡೆಯಬಹುದಾಗಿದ್ದು ಆದರೆ ಉನ್ನತ ಅಧಿಕಾರಿಗಳು ಸರ್ಕಾರಕ್ಕೆ ಮೋಸ ಮಾಡಿ ಹಣ ಬೇರೆ ಬೇರೆ ಇಲಾಖೆಗಳಿಂದ ಪಡೆಯುತ್ತಿದ್ದು ಎರಡು ಬಾರಿ ಪಡೆಯುತ್ತಿರುವ ಉದಾಹರಣೆಗೆ ಶ್ರೀ ಕುಲಕರ್ಣಿ ಎನ್. ಎಲ್, ಇವರು (ಸಹಾಯಕ ಕಾರ್ಯದರ್ಶಿ, ಲೋಕಸೇವಾ ಆಯೋಗ—ಮೂಲ ಅಧೀನ ಕಾರ್ಯದರ್ಶಿ, ವಿಧಾನ ಸೌಧ) ಬೇರೆ ಉನ್ನತ ಅಧಿಕಾರಿಗಳ ಶಾಮಿಲಿ ನೊಡನೆ ಸರ್ಕಾರಕ್ಕೆ ವಂಚಿಸಿ ಎರಡು ಬಾರಿ ಹಣ ಪಡೆದಿದ್ದಾರೆ. ೧೯೮೫ರಲ್ಲಿ ವಿಧಾನ ಸೌಧದಲ್ಲಿ ಕೆಲಸ ಮಾಡುತ್ತಿದ್ದಾಗ ರೂ. ೨,೨೫೯ ರೂಪಾಯಿಗಳನ್ನು ಚೆಕ್ ನಂಬರ್ ೪. ೯೫೩೨೫೫ ದಿನಾಂಕ ೨೧.೫.೮೫ ರಲ್ಲಿ ಪಡೆದು ೫.೬.೮೫ರಲ್ಲಿ ಬ್ಯಾಂಕಿನಿಂದ ಹಣ ಪಡೆದಿದ್ದಾರೆ. ಮತ್ತೆ ೧೯೮೬ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗ—ಬೆಂಗಳೂರಿನಲ್ಲಿ ಚೆಕ್ ನಂ. ೪. ೯೪೨೨೦೬ ದಿನಾಂಕ ೭. ೬. ೮೬ ರಲ್ಲಿ ರೂ. ೨,೫೧೨-೫೦ ಪಡೆದು ದಿನಾಂಕ ೧೦. ೬. ೮೬ರಲ್ಲಿ ಹಣವನ್ನು ಬ್ಯಾಂಕ್‌ನಿಂದ ಕ್ಯಾಷ್ ಮಾಡಿಸಿಕೊಂಡಿದ್ದಾರೆ. ಈ ಪ್ರಕರಣ ಸಾಬೀತಾದರೆ ಸರ್ಕಾರ ಇಂತಹ ಭ್ರಷ್ಟ ಅಧಿಕಾರಿ ಮತ್ತು ಇಂತಹ ಕೆಲಸದಲ್ಲಿ ಶಾಮಿಲಾಗಿರುವ ಉನ್ನತ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ಸರಿಯಾದ ತನಿಖೆಗೆ ಆಜ್ಞೆ ಮಾಡುವರೆ ಎಂಬ ಭ್ರಷ್ಟಾಚಾರದ ಮಹತ್ವದ ವಿಷಯದ ಬಗ್ಗೆ ಸರ್ಕಾರದ ಪೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ವಿ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಇಲಾಖೆಯಿಂದ ನಾನು ಉತ್ತರವನ್ನು ತರಿಸಿ ಕೊಡುತ್ತೇನೆ.

(೧೭) ಕುಂದಾಪುರ ಕ್ಷೇತ್ರದ ಮೊಳಹಳ್ಳಿ ಗ್ರಾಮದಲ್ಲಿ ಬೆಂಕಿಯ ಅಕಸ್ಮಿಕದಿಂದ ೪ ಕುಟುಂಬಿಗಳು ನಾಶವಾಗಿರುವುದು

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಕುಂದಾಪುರ ಕ್ಷೇತ್ರದ ಮೊಳಹಳ್ಳಿ ಗ್ರಾಮದ ತೆಂಕ ಬೈಲನಲ್ಲಿ ವಾಸ್ತವ್ಯವಿರುವ (೧) ಗಂಗಮ್ಮ ಶೆಡ್ತಿ, (೨) ಗುಲಾಬಿ ಶೆಡ್ತಿ, (೩) ಅಕ್ಕಯ್ಯ ಶೆಡ್ತಿ, (೪) ಸೀತರಾಮ ಶೆಡ್ತಿ, ಇವರುಗಳ ಮನೆಯು ದಿ. ೨. ೨. ೮೭ ರಂದು ಮಧ್ಯಾಹ್ನ ೩-೩೦ ಗಂಟೆಗೆ ಬೆಂಕಿ ಅಕಸ್ಮಿಕದಿಂದ ಸಂಪೂರ್ಣ ನಾಶವಾಗಿ ಮೂರು ಮನೆಗಳಲ್ಲಿದ್ದ ನಾಲ್ಕು ಕುಟುಂಬಗಳವರು ನಿರ್ಗತಿಕರಾಗಿರುತ್ತಾರೆ. ಮಾಜಿ ಗೇಣಿದಾರರಾದ ನಾಲ್ಕು ಕುಟುಂಬದವರು ತಮ್ಮಲ್ಲಿದ್ದ ಆಕ್ಕಿ, ಬಟ್ಟೆ, ದಿನನಿತ್ಯ ಉಪಯೋಗಿಸುವ ಎಲ್ಲಾ ಸ್ವತ್ತುಗಳನ್ನು ಸಂಪೂರ್ಣವಾಗಿ ಕಳೆದುಕೊಂಡಿರುತ್ತಾರೆ.

ಈ ಬೆಂಕಿ ಅಕಸ್ಮಿಕದಿಂದ ಹೊಂದಂತಹ ನಾಲ್ಕು ಕುಟುಂಬದವರಿಗೆ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಪರಿಹಾರ ಧನವನ್ನು ಮಂಜೂರು ಮಾಡಬೇಕೆಂದು ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.